# Karnataka State Open University

Mukthagangotri, Mysuru-570006

"Silver Jubilee Celebration Year" (June2021-May 2022)

No. KSOU/Exam/Conv/501/2021-22

Date : 14-02-2022

## NOTIFICATION

### 17th Annual Convocation - 2022.

1. **17th Annual Convocation of the Karnataka State Open University** will be held during **Second Week of April 2022** for the
   a. Candidates who have admitted on or before 2012-13 and passed after April/May 2017 Examinations till Nov/Dec 2021 Exam.
   b. Candidates who have admitted during 2018-19 and completed UG/PG program examinations till Nov/Dec 2021.
   c. Candidates who have admitted during 2019-20 and passed the MA/M.Com, M.Lib.I.Sc/B.Lib.I.Sc, and B.Ed till Nov/Dec 2021 Examinations.
   **The exact place and time will be notified.**
2. **Admission to the Convocation (IN PERSON) is open to:**
   Winners of Medals and Cash Prizes in Bachelor's and Master's Degree, Master's Degree with First Class and Ph.D awardees.
3. **Admission to the Convocation (IN ABSENTIA) is open to:**
   The candidates who completed Bachelor's and Master's Degree till Nov 2021 Exams.
4. Candidates may obtain their Degrees either **'IN PERSON'** or **'IN ABSENTIA'** by applying in the prescribed format. After paying the prescribed fee through online the candidate can download the application from KSOU website: **www.ksoumysuru.ac.in**
5. Certificates to the candidates **'IN ABSENTIA'** will be sent directly by Speed Post after **Three Months** from the Date of Convocation.
6. Fee for obtaining Degree Certificate is noted below: -

| | | |
|---|---|---|
| **IN PERSON** | : Medallists/Cash Prize Winners, Post-Graduates Students with 1st Class & Ph.D students | : **Rs. 1200/-** |
| **IN ABSENTIA** | : All UG & PG Degree & Ph.D students | : **Rs. 1500/-** |

**NOTE** : **In addition to the above prescribed fee, Rs. 500/- also paid Compulsorily towards the membership fee for Alumni Association.**

7. **Those students who have not got the NCL removed OR Class not Declared, correction of name and any other discrepancies in their marks cards, are directed to submit all their original marks cards to the Registrar (Evaluation) for correction on or before 07-03-2022. Otherwise, they will not be eligible to obtain degree certificate.**
8. YOU ARE REQUIRED TO FURNISH THE COMPLETE INFORMATION IN THE APPLICATION FORM, AND THEN AFFIX ONE PASSPORT SIZE COLOUR PHOTO. COMPLETELY FILLED APPLICATION FORM ALONG WITH TWO MORE PHOTOS KEPT IN A SEPARATE ENVELOP SHOULD REACH THE **REGISTRAR (EVALUATION), KARNATAKA STATE OPEN UNIVERSITY, MUKTHAGANGOTRI, MYSURU – 570 006, BEFORE THE LAST DATE MENTIONED BELOW.**

| LAST DATE FOR PAYMENT OF FEES (IN PERSON ONLY) | |
|---|---|
| WITHOUT FINE | 07-03-2022 |
| WITH FINE OF Rs. 100/- | 21-03-2022 |

**BY ORDER**

16/2/22

**REGISTRAR**

Scanned with CamScanner

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು– ೫೭೦ ೦೦೬

"ಬೆಳ್ಳಿ ಹಬ್ಬದ ವರ್ಷಾಚರಣೆ" (ಜೂನ್-೨೦೨೧ ರಿಂದ ಮೇ-೨೦೨೨)


ಸಂಖ್ಯೆ:ಕರಾಮುವಿ/ಪವಿ/ಘ.ವಿ./501/2021-22

ದಿನಾಂಕ: 14-02-2022

## ಅಧಿಸೂಚನೆ

### 17ನೇ ವಾರ್ಷಿಕ ಘಟಿಕೋತ್ಸವ – 2022

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2012-2013 ಹಾಗೂ ಅದಕ್ಕೂ ಹಿಂದಿನ ಸಾಲಿನಲ್ಲಿ ಪ್ರವೇಶಾತಿ ಪಡೆದು ಏಪ್ರೀಲ್/ಮೇ 2017ರ ನಂತರದಲ್ಲಿ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು, 2018-19ನೇ ಸಾಲಿನಲ್ಲಿ ಪ್ರವೇಶಾತಿ ಪಡೆದು ನವೆಂಬರ್ 2021ರ ವರೆಗೆ ಉತ್ತೀರ್ಣರಾದ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ 2019-20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಎಂ.ಎ/ಎಂ.ಕಾಂ, ಎಂ.ಲಿಬ್.ಐ.ಎಸ್ಸಿ/ಬಿ.ಲಿಬ್.ಐ.ಎಸ್ಸಿ, ಮತ್ತು ಬಿ.ಇಡಿ ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ **ಹದಿನೇಳನೇ ವಾರ್ಷಿಕ ಘಟಿಕೋತ್ಸವವನ್ನು 2022ನೇ ಏಪ್ರಿಲ್ ಎರಡನೇ ವಾರದಲ್ಲಿ** ನಡೆಸಲು ಉದ್ದೇಶಿಸಲಾಗಿದೆ. ಘಟಿಕೋತ್ಸವ ನಡೆಯುವ ನಿಗದಿತ ಸಮಯ ಮತ್ತು ಸ್ಥಳವನ್ನು ಮುಂದೆ ಪ್ರಕಟಿಸಲಾಗುವುದು ಎಂದು ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

2. **ಘಟಿಕೋತ್ಸವ ಉಪಸ್ಥಿತಿಯಲ್ಲಿ ಭಾಗವಹಿಸಲು ಈ ಕೆಳಕಂಡವರು ಅರ್ಹರಾಗಿರುತ್ತಾರೆ.**

   **ಪದಕ ಮತ್ತು ನಗದು ಬಹುಮಾನ ವಿಜೇತರು, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಪಿಹೆಚ್.ಡಿ ಪದವೀಧರರು.**

3. **ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಈ ಕೆಳಕಂಡವರು ಅರ್ಹರಾಗಿರುತ್ತಾರೆ.**

   ವಿಶ್ವವಿದ್ಯಾನಿಲಯವು ನವೆಂಬರ್ 2021ರ ವರೆಗೆ ನಡೆಸಿದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು.

4. ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ **'ಉಪಸ್ಥಿತಿಯಲ್ಲಿ ಅಥವಾ ಅನುಪಸ್ಥಿತಿಯಲ್ಲಿ'** ಪದವಿ ಪಡೆಯಬಹುದು. ಆನ್‌ಲೈನ್ ಅರ್ಜಿ ನಮೂನೆಯು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ **www.ksoumysuru.ac.in** ಇಲ್ಲಿ ಲಭ್ಯವಿದ್ದು ಆನ್‌ಲೈನ್ ಮೂಲಕ ಮಾತ್ರ ಶುಲ್ಕ ಪಾವತಿಸಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

5. ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ನೇರವಾಗಿ ಪ್ರಮಾಣ ಪತ್ರವನ್ನು ಘಟಿಕೋತ್ಸವ ನಡೆದ **ಮೂರು ತಿಂಗಳ** ನಂತರ ತ್ವರಿತ ಅಂಚೆ ಮೂಲಕ ಕಳುಹಿಸಿಕೊಡಲಾಗುವುದು.

6. ಪದವಿ ಪ್ರಮಾಣ ಪತ್ರಕ್ಕಾಗಿ ನಿಗದಿತ ಶುಲ್ಕ ಈ ಕೆಳಕಂಡಂತಿದೆ.

| | | |
|---|---|---|
| **ಉಪಸ್ಥಿತರು** : | ಪದಕ ಮತ್ತು ನಗದು ಬಹುಮಾನ ವಿಜೇತರು, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಸ್ನಾತಕೋತ್ತರ ವಿದ್ಯಾರ್ಥಿಗಳು, ಮತ್ತು ಪಿಹೆಚ್.ಡಿ ವಿದ್ಯಾರ್ಥಿಗಳು | : **ರೂ. 1200/-** |
| **ಅನುಪಸ್ಥಿತರು** : | ಎಲ್ಲಾ ಸ್ನಾತಕ, ಸ್ನಾತಕೋತ್ತರ ಮತ್ತು ಪಿಹೆಚ್.ಡಿ ವಿದ್ಯಾರ್ಥಿಗಳು | : **ರೂ. 1500/-** |
| **ಸೂಚನೆ** : | **ಮೇಲೆ ನಿಗದಿಪಡಿಸಿದ ಶುಲ್ಕದ ಜೊತೆಗೆ ರೂ. 500/- ಗಳನ್ನು ಹಿರಿಯ ವಿದ್ಯಾರ್ಥಿ ಸಂಘದ ಸದಸ್ಯತ್ವ ಶುಲ್ಕವಾಗಿ ಕಡ್ಡಾಯವಾಗಿ ಪಾವತಿಸತಕ್ಕದ್ದು.** | |

7. **ಯಾವುದೇ ವಿದ್ಯಾರ್ಥಿಯ ಅಂತಿಮ ವರ್ಷದ ಅಂಕಪಟ್ಟಿಯಲ್ಲಿ NCL ತೆರವುಗೊಂಡಿರದಿದ್ದಲ್ಲಿ ಅಥವಾ ಇನ್ನಾವುದೇ ತಿದ್ದುಪಡಿಗಳಿದ್ದಲ್ಲಿ ತಿದ್ದುಪಡಿಗಾಗಿ ತಮ್ಮ ಮೂಲ ದಾಖಲೆಗಳನ್ನು ಕುಲಸಚಿವರು (ಪರೀಕ್ಷಾಂಗ) ಇವರಿಗೆ ದಿನಾಂಕ 07-03-2022 ರೊಳಗೆ ಸಲ್ಲಿಸಿ ಸರಿಪಡಿಸಿಕೊಂಡು ದರ್ಜೆ ಘೋಷಣೆ ಮಾಡಿಸಿಕೊಳ್ಳುವುದು. ತಪ್ಪಿದ್ದಲ್ಲಿ ಪದವಿ ಪಡೆಯಲು ಅರ್ಹರಾಗಿರುವುದಿಲ್ಲ.**

8. ಅರ್ಜಿಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಿ ಮುದ್ರಿಸಿಕೊಂಡು ನಂತರ ಒಂದು ಪಾಸ್‌ಪೋರ್ಟ್ ಅಳತೆಯ ಕಲರ್ ಭಾವಚಿತ್ರವನ್ನು ಅಂಟಿಸುವುದು. ಎರಡು ಭಾವಚಿತ್ರಗಳನ್ನು ಸಣ್ಣ ಲಕೋಟೆಯಲ್ಲಿ ಪ್ರತ್ಯೇಕವಾಗಿ ಇರಿಸಿ ಅರ್ಜಿಯೊಂದಿಗೆ ಲಗತ್ತಿಸುವುದು. ಭರ್ತಿ ಮಾಡಿದ ಅರ್ಜಿಯನ್ನು, **ಕುಲಸಚಿವರು (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತಗಂಗೋತ್ರಿ, ಮೈಸೂರು-570006** ಇವರಿಗೆ ಈ ಕೆಳಗೆ ಸೂಚಿಸಿರುವ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

| ಶುಲ್ಕ ಪಾವತಿಸಲು ಕೊನೆಯ ದಿನಾಂಕ (ಉಪಸ್ಥಿತರಿಗೆ ಮಾತ್ರ) | |
|---|---|
| ದಂಡ ಶುಲ್ಕವಿಲ್ಲದೆ | 07-03-2022 |
| 100/- ರೂ. ದಂಡ ಶುಲ್ಕದೊಡನೆ | 21-03-2022 |

ಆದೇಶದ ಮೇರೆಗೆ

Rafimul 16/2/22

ಕುಲಸಚಿವ

Scanned with CamScanner